<u>ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ</u>

<u>ಸಿ ಸಿ ನಂಃ **233/2022**</u>

ಪ್ರಾಸಾ ಃ 1

ಚಾಸಾ ಃ 1

ಸಾಕ್ಷಿಯ ಹೆಸರುಃ ಸುಶೀಲ
ತಂದೆ /ಗಂಡನ ಹೆಸರು ಃ ಚಂದ್ರ
ವಯಸ್ಸು ಃ 50
ಉದ್ಯೋಗ ಃ ಕೂಲಿ ಕೆಲಸ
ವಾಸ ಸ್ಥಳ ಃ ಹುದುಗೂರು ಗ್ರಾಮ, ಕುಶಾಲನಗರ.

ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **18.08.2022**

ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ

ನನಗೆ ಆರೋಪಿ ಪರಿಚಯ ಇರುತ್ತದೆ. ಈ ಕೇಸಿನ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಆರೋಪಿ ನನಗೆ ಹಲ್ಲೆ ಮಾಡಿ, ಅವ್ಯಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಎಂದು ಯಾವುದೆ ದೂರು ನೀಡಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೆ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಮತ್ತು ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಯು ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು, ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ಕ್ಕೆ ನನ್ನ ಸ್ವಂತ ಕೆಲಸದ ನಿಮಿತ್ತ ಕುಶಾಲನಗರ ಪೊಲೀಸ್ ಠಾಣೆಗೆ ಹೋದಾಗ ಸಹಿ ಮಾಡಿರುತ್ತೇನೆ ಮತ್ತು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೂತ್ತಿರುವುದಿಲ್ಲ ಮತ್ತು ಪೊಲೀಸರು ಸಹ ಓದಿ ತಿಳಿಸಿರುವುದಿಲ್ಲ.

(ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ. ವಾದ ವಿವಾದ ಆಲಿಸಿದ್ದೇನೆ. ದಾಖಲೆಗಳನ್ನು ಪರಿಶೀಲಿಸಿದೆ. ಅನುಮತಿಸಿದೆ.)

ಪಾಟೀ ಸವಾಲುಃ

ದಿಃ 16.11.2021 ರಂದು ಸಂಜೆ 5.00 ಗಂಟೆಗೆ ಮನೆಗೆ ಬಂದು 5.30 ರ ಸಮಯದಲ್ಲಿ ನಾನು ಮತ್ತು ನನ್ನ ಮಗ ಚಾಸಾ-2 ಮನೆಯ ಮುಂದುಗಡೆ ಕುಳಿತುಕೊಂಡು ಮನೆಗೆ

ಬೇರೆಯವರ ಬೆಕ್ಕು ಬಂದು ತೊಂದರೆ ಕೊಡುತ್ತಿದೆ ಎಂದು ಮಾತನಾಡುತ್ತಿದ್ದಾಗ, ಪಕ್ಕದ ಮನೆಯವರಾದ ಆರೋಪಿ ಬಂದು ಏನೆ ಬೇವರ್ಸಿ ನನ್ನ ಮೇಲೆ ಹೇಳುತ್ತಿದ್ದೀಯಾ ಎಂದು ಬಾಯಿಗೆ ಬಂದಂತೆ ಬೈದು ಜಗಳ ಮಾಡಿ , ಒಂದು ದೊಣ್ಣೆಯಿಂದ ನನ್ನ ತಲೆಯ ಹಿಂಭಾಗಕ್ಕೆ ಜೋರಾಗಿ ಹೊಡೆದು ನಾನು ಅಲ್ಲೆ ಬಿದಿದ್ದದ್ದು ಚಾಸಾ-2 ರವರು ನನ್ನನ್ನು ಮೇಲೆ ಎಬ್ಬಿಸಿ ಕೂರಿಸಿ , ನನ್ನ ತಲೆಯ ಹಿಂಭಾಗ ರಕ್ತ ಬರುತ್ತಿದ್ದು, ಪಕ್ಕದಲ್ಲಿ ಇದ್ದ ಚಾಸಾ-3 ಮತ್ತು 4 ರವರು ನೋಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ ತನ್ನ ಕೈಯಲ್ಲಿ ಇದ್ದ ದೊಣ್ಣೆಯನ್ನು ಅಲ್ಲೆ ಬೀಸಾಡಿ ಅವಳ ಮನೆಗೆ ಹೋದಳು ಎಂದರೆ ಸರಿಯಲ್ಲ. ಆ ದಿನ ರಾತ್ರಿಯಾದ ಕಾರಣ ಚಿಕಿತ್ಸೆಗೆ ಬರಲಾಗದೆ ತಲೆಗೆ ಬಟ್ಟೆ ಕಟ್ಟಿ ಮನೆಯಲ್ಲಿ ಮಲಗಿದ್ದು, ಮರು ದಿನ ನನ್ನ ಅತ್ತಿಗೆ ಮಗಳಾದ ಚಾಸಾ-7 ರವರು 11.00 ಗಂಟೆಗೆ ನನ್ನನ್ನು ಕುಶಾಲನಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ಈಗ ಓದಿ ಕೇಳಿಸಿಕೊಂಡ ನಿಪಿ-1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 17.11.2021 ರಂದು ಪೊಲೀಸರು ಹುದುಗೂರು ಗ್ರಾಮಕ್ಕೆ ಬಂದಾಗ ನಾನು ಅವರಿಗೆ ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೊಲೀಸರು ನನ್ನ ಹಾಗೂ ಪಂಚರ ಸಮಕ್ಷಮ ಈಗ ಓದಿ ಕೇಳಿಸಿಕೊಂಡ ನಿಪಿ-2 ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿ, ಸದ್ರಿ ಸ್ಥಳದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿಯೊಂದಿಗೆ ರಾಜಿಯಾಗಿರುತ್ತೇನೆ ಎಂದರೆ ಸರಿ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.